

ನೀರು ತೆಳುವಾಗಿ ಹರಿದು ಸಣ್ಣ ಕೊಳಗಳಲ್ಲಿ ಸೇರುತ್ತದೆ.

ತಾಲ್ ಛಾಪರ್‌ನಲ್ಲಿನ ಹಳದಿ ಹಾಗೂ ಚಿನ್ನದ ಬಣ್ಣದ ಹುಲ್ಲುಗಾವಲಿನಲ್ಲಿ ಸಾವಿರಾರು ಸಂಖ್ಯೆಯಲ್ಲಿರುವ ಕೃಷ್ಣಮೃಗಗಳನ್ನು ನೋಡಲು ಎರಡು ಕಣ್ಣು ಸಾಲವು. ಅದಕ್ಕೆಂದೇ ಮೂರನೇ ಕಣ್ಣು (ಕ್ಯಾಮೆರಾ) ಹೊತ್ತು ಛಾಯಾಗ್ರಾಹಕರು ಇತ್ತ ಧಾವಿಸುತ್ತಾರೆ. ಈ ಮರುಭೂಮಿ ಹಲವು ಪ್ರಾಣಿಗಳು ಮತ್ತು ಸರೀಸೃಪ ಪ್ರಭೇದಗಳನ್ನು ಸಹ ನೋಡಲು ಉತ್ತಮ ಸ್ಥಳವಾಗಿದೆ.

ಸುಮಾರು 300 ಜಾತಿಯ ವಲಸೆ ಮತ್ತು ಸ್ಥಳೀಯ ಪಕ್ಷಿಗಳನ್ನು ಇಲ್ಲಿ ಗುರುತಿಸಲಾಗಿದೆ. ವಲಸೆ ಹಕ್ಕಿಗಳು ಮಧ್ಯ ಏಷ್ಯಾ ಮತ್ತು ಯೂರೋಪಿನಿಂದ ಬರುತ್ತವೆ.

ತಾಲ್ ಛಾಪರ್‌ನಲ್ಲಿ ಹ್ಯಾರಿಯರ್, ಈಸ್ಟರ್ನ್ ಇಂಪೀರಿಯಲ್ ಈಗಲ್, ಪೇಲ್ ಹ್ಯಾರಿಯರ್, ಮಾರ್ಷ್ ಹ್ಯಾರಿಯರ್, ಶಾರ್ಟ್–ಟೋಡ್ ಈಗಲ್, ಟಾನಿ ಈಗಲ್ಸ್, ಸ್ಪಾರೋ ಹಾಕ್, ಕ್ರೆಸ್ಟೆಡ್ ಲಾರ್ಕ್ಸ್, ಡೆಮೊಸೆಲ್ ಕ್ರೇನ್ಸ್, ಲಿಟಲ್ ಗ್ರೀನ್ ಬೀ–ಈಟರ್ಸ್, ಸ್ಕೈಲಾರ್ಕ್ಸ್, ಗ್ರೀನ್ ಬೀ–ಈಟರ್ಸ್, ಕಂದು ಪಾರಿವಾಳಗಳು ಮತ್ತು ಬ್ಲಾಕ್ ಐಬಿಸ್ ಮುಂತಾದವುಗಳನ್ನು ಕಾಣಬಹುದು. ಹಾಗಾಗಿ ತಾಲ್ ಛಾಪರ್ ಅಭಯಾರಣ್ಯಕ್ಕೆ ಪಕ್ಷಿಪ್ರಿಯರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ.

ಈ ಅಭಯಾರಣ್ಯ ದೆಹಲಿಯಿಂದ ಸುಮಾರು 350 ಕಿ.ಮೀ. ಮತ್ತು ಜೈಪುರದಿಂದ 200 ಕಿ.ಮೀ. ದೂರದಲ್ಲಿದೆ. ಇಲ್ಲಿಗೆ ಭೇಟಿ ನೀಡಲು ಉತ್ತಮ ಸಮಯ, ನವೆಂಬರ್‌ನಿಂದ ಫೆಬ್ರುವರಿ.

‘ಕೆಲವು ಅಪರೂಪದ ಬೇಟೆಯಾಡುವ ಪಕ್ಷಿಗಳನ್ನು ಇಲ್ಲಿ ನೋಡಬಹುದು. ವಲಸೆ ಹಕ್ಕಿಗಳು ತಮ್ಮ ಚಳಿಗಾಲದ ವಾಸಕ್ಕಾಗಿ ಇಲ್ಲಿಗೆ ಆಗಮಿಸುತ್ತವೆ. ದಕ್ಷಿಣದ ರಾಜ್ಯಗಳಿಗೆ ವಲಸೆ ಹೋಗುವಾಗ ಕೆಲವು ಪಕ್ಷಿಗಳು ಇಲ್ಲಿ ತಂಗಿದ್ದು ಹೋಗುತ್ತವೆ. ಪಕ್ಷಿಪ್ರಿಯರಿಗೆ ಮತ್ತು ಛಾಯಾಗ್ರಾಹಕರಿಗೆ ಇದು ಹೇಳಿ ಮಾಡಿಸಿದಂತಹ ತಾಣ’ ಎನ್ನುತ್ತಾರೆ ಛಾಯಾಗ್ರಾಹಕರಿಗೆ ಮಾರ್ಗದರ್ಶನ ಮಾಡುವ ರವೀಂದ್ರ.

ಪ್ರತಿಕ್ರಿಯಿಸಿ: feedback@sudha.co.in



ಹಾರುವ ಮುನ್ನ ತುಸು ವಿರಾಮದಲ್ಲಿ ‘ಬ್ಲಾಕ್ ಶೋಲ್ಡರ್ಡ್ ಕೈಟ್’



ಸ್ಪಾಟೆಡ್ ಕ್ರೀಪರ್‌ನ ವಿಲಾಸ ಯಾವುದು ಬಲ್ಲಿರಾ?



ಮುಂಗುಸಿಗಳ ಫ್ಯಾಮಿಲಿ ಫೋಟೊ



ದೊಡ್ಡ ಕಿವಿ, ಕುಚ್ಚು ಬಾಲದ ಮರುಭೂಮಿಯ ತೋಳ